## ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ದಿನಾಂಕ 17-3-1992ರ 16ನೇ ಪಟ್ಟಿಯಲ್ಲಿರುವ 72 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ 51 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

## ಸ್ವಾತಂತ್ರ್ಯ ಯೋಧರ ಪೆನ್‌ಶನ್‌ಗಾಗಿ ಬಂದ ಅರ್ಜಿಗಳ ಸಂಖ್ಯೆ

1256. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈವರೆಗೆ ಮಾಸಾಶನ ಕೇಳಿ ಸ್ವಾತಂತ್ರ್ಯ ಯೋಧರಿಂದ ಬಂದಿರುವ ಒಟ್ಟು ಅರ್ಜಿಗಳೆಷ್ಟು?

ಆ) ಆ ಪೈಕಿ ಈವರೆಗೆ ಎಷ್ಟು ಅರ್ಜಿಗಳನ್ನು ಮಂಜೂರು ಮಾಡಲಾಗಿದೆ ಹಾಗೂ ಎಷ್ಟು ಹಣ ಕೊಡಲಾಗಿದೆ?

ಇ) ಇನ್ನು ಎಷ್ಟು ಅರ್ಜಿಗಳು ಮಂಜೂರಾತಿಗೆ ಬಾಕಿ ಇದೆ?

ಈ) ಇವುಗಳನ್ನು ಯಾವಾಗ ಮಂಜೂರು ಮಾಡಲಾಗುವುದು; ಹಾಗೂ ಹಣ ಮಂಜೂರು ಮಾಡದೇ ಇರಲು ಕಾರಣಗಳೇನಾದರೂ ಇವೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಪಿಂಚಣಿ ನೀಡುವ ಯೋಜನೆಯನ್ನು 1969ನೇ ಸಾಲಿನಿಂದ ಜಾರಿಗೆ ತಂದ ದಿನದಿಂದ ಇಲ್ಲಿಯವರೆಗೆ ಸುಮಾರು 33.043 ಮಂದಿ ಸದರಿ ಪಿಂಚಣಿ ಕೋರಿ ಅರ್ಜಿ ಸಲ್ಲಿಸಿದ್ದರು.

ಆ) ರಾಜ್ಯದಲ್ಲಿ 19.914 ಮಂದಿಗೆ ರಾಜ್ಯ ಗೌರವಧನ ಮಂಜೂರು ಮಾಡಲಾಗಿದೆ. ಪ್ರತಿಯೊಬ್ಬ ಸ್ವಾತಂತ್ರ್ಯ ಹೋರಾಟಗಾರರಿಗೆ/ಅವಲಂಬಿತ ವಿಧವೆಯರಿಗೆ ಮಾಹೆಯಾನ ರೂ. 400-00 ರಂತೆ ಮಾಸಾಶನ ಕೊಡಲಾಗುತ್ತಿದೆ.

ಇ) 1800 ಅರ್ಜಿಗಳು ಬಾಕಿ ಇದೆ.

ಈ) ಅರ್ಜಿದಾರರಿಂದ ಸಂಪೂರ್ಣ ಮಾಹಿತಿ ಬರದೇ ಇರುವ ಕಾರಣ ಬಾಕಿ ಇರುವ ಈ ಅರ್ಜಿಗಳಲ್ಲಿ ಅರ್ಜಿದಾರರು ಸಂಪೂರ್ಣ ಮಾಹಿತಿ ಹಾಜರುಪಡಿಸಿದ ಕೂಡಲೇ ಈ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವುದು.

## 1991ನೇ ಡಿಸೆಂಬರ್ ಕೊನೆಯವರೆಗೆ ಹೈಕೋರ್ಟಿನಲ್ಲಿ ಬಾಕಿ ಇರುವ ಪ್ರಕರಣಗಳು

1814. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಹೈಕೋರ್ಟಿನಲ್ಲಿ 1991ನೇ ಡಿಸೆಂಬರ್ ಕೊನೆಯವರೆಗೆ ತೀರ್ಮಾನವಾಗದೆ ಬಾಕಿ ಉಳಿದಿರುವ ಪ್ರಕರಣಗಳೆಷ್ಟು: